4. ಮೆಗಾಸಿಟಿ ಯೋಜನೆಯಲ್ಲಿ ಯಾವ ಪೂರಕ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು? (ವಿವರ ನೀಡುವುದು)

**ಉತ್ತರಿಸುವ ಸಚಿವರು: ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**

## ಉತ್ತರ

1. ಕೇಂದ್ರ ಪುರಸ್ಕೃತ ಮೆಗಾಸಿಟಿ ಯೋಜನೆಯು ಅನುಷ್ಠಾನದಲ್ಲಿರುತ್ತದೆ.

2. ಈ ನಿಟ್ಟಿನಲ್ಲಿ ಇದುವರೆವಿಗೂ 24 ಯೋಜನೆಗಳಿಗೆ ಹಣ ಸಹಾಯ ಒದಗಿಸಲಾಗಿದೆ.

3. ಈ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವ ಪ್ರತಿಯೊಂದು ಯೋಜನೆಗೆ ಪೂರ್ಣಗೊಳಿಸಲು ಕಾಲ ನಿರ್ಣಯ ಇರುತ್ತದೆ.

4. ಬೆಂಗಳೂರು ಮೆಗಾಸಿಟಿ ಯೋಜನೆಯಡಿ ಉತ್ತಮ ಹಾಗೂ ಸುರಕ್ಷಿತ ಸಾರಿಗೆ ವ್ಯವಸ್ಥೆ ಯೋಜನೆ, ಪರಿಸರಾಭಿವೃದ್ಧಿ ಯೋಜನೆಗಳೂ, ಕೊಳಚೆ ಪ್ರದೇಶಾಭಿವೃದ್ಧಿ ಯೋಜನೆ ಸಂಚಾರವನ್ನು ಸುಗಮಗೊಳಿಸುವುದು ಮತ್ತು ಇತರೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಚಾಮರಾಜ ನಗರದಲ್ಲಿ ನ್ಯಾಯಾಲಯ ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 935(542)

**ಸದಸ್ಯರ ಹೆಸರು: ಶ್ರೀ ಗುರುಸ್ವಾಮಿ ಸಿ.(ಚಾಮರಾಜನಗರ)**

## ಪ್ರಶ್ನೆ

ಅ) ಚಾಮರಾಜನಗರದಲ್ಲಿ ಸೀನಿಯರ್ ಡಿವಿಜನ್ ನ್ಯಾಯಾಲಯ ಮತ್ತು ಜಿಲ್ಲಾ ನ್ಯಾಯಾಲಯ ಆರಂಭಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಆ) ಹಾಲಿ ನ್ಯಾಯಾಲಯದ ಕಟ್ಟಡದಲ್ಲಿ ಮೊದಲನೇ ಅಂತಸ್ತು ನಿರ್ಮಾಣಕ್ಕೆ ಹಣ ಬಿಡುಗಡೆಯಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ?

**ಸಚಿವರ ಹೆಸರು ಮತ್ತು ಖಾತೆ: ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)**

## ಉತ್ತರ

ಅ) ಸೂಕ್ತ ಕಟ್ಟಡ ಹಾಗೂ ಸ್ಥಳಾವಕಾಶ ದೊರೆಯದೆ ಇರುವುದರಿಂದ ಚಾಮರಾಜನಗರದಲ್ಲಿ ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಮತ್ತು ಜಿಲ್ಲಾ ನ್ಯಾಯಾಲಯವನ್ನು ಸ್ಥಾಪಿಸಲಾಗಿರುವುದಿಲ್ಲ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಬೈಂದೂರು ಕ್ಷೇತ್ರದಲ್ಲಿ ಅಗ್ನಿಶಾಮಕ ಕೇಂದ್ರ ಸ್ಥಾಪಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:936(271)

**ಸದಸ್ಯರ ಹೆಸರು: ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು)**

## ಪ್ರಶ್ನೆ

ಅ) ಬೈಂದೂರು ವಿಧಾನ ಸಭೆ ಕ್ಷೇತ್ರದ ಶಿರೂರು, ಕುಂದಾಪುರದಿಂದ 45 ಕಿ.ಮಿ. ದೂರವಿದೆ. ಕುಂದಾಪುರದಲ್ಲಿ ಅಗ್ನಿಶಾಮಕ ಕೇಂದ್ರವಿದ್ದು, ಶಿರೂರಿನಲ್ಲಿ ಯಾವುದೇ ಅನಾಹುತ ಸಂಭವಿಸಿದಲ್ಲಿ ಆ ಸ್ಥಳಕ್ಕೆ ಹೋಗುವಾಗ ಸಂಪೂರ್ಣ ನಾಶಗೊಂಡಿರುತ್ತದೆ. ಆದ್ದರಿಂದ ಬೈಂದೂರು ಕ್ಷೇತ್ರದಲ್ಲಿ ಒಂದು ಅಗ್ನಿಶಾಮಕ ಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

**ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)**

## ಉತ್ತರ

ಅ) ಬೈಂದೂರು, ಭಟ್ಕಳ ಅಗ್ನಿಶಾಮಕ ಠಾಣೆಗೆ ಕೇವಲ 18 ಕಿ.ಮಿ. ದೂರದಲ್ಲಿರುವ ಕುಂದಾಪುರ ಅಗ್ನಿಶಾಮಕ ಠಾಣೆಗೆ 30 ಕಿ.ಮಿ. ದೂರವಿರುವುದರಿಂದ ಬೈಂದೂರಿನಲ್ಲಿ ಅಗ್ನಿಶಾಮಕ ಠಾಣೆಯನ್ನು ಸದ್ಯಕ್ಕೆ ಸ್ಥಾಪಿಸುವ ಅವಶ್ಯಕತೆ ಇರುವುದಿಲ್ಲ.

ತೆರಿಗೆ ಸಂಗ್ರಹದ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 937(1302)